# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 826(1005) |
| ಉತ್ತರಿಸುವ ದಿನಾಂಕ | : | 17.12.2024 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಒಳಪಡದಿರುವ ಪ್ರದೇಶದಲ್ಲಿ ಏಕ ಹಾಗೂ ಬಹು ನಿವೇಶನ ಬಡಾವಣೆ ನಕ್ಷೆ ಅನುಮೋದನೆಗೆ ಅನುಸರಿಸುತ್ತಿರುವ ನಿಯಮಗಳೇನು; | ಸ್ಥಳೀಯ ಯೋಜನಾ ಪ್ರದೇಶ ಹೊರತುಪಡಿಸಿದ ಪ್ರದೇಶದಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರನ್ವಯ ಅಭಿವೃದ್ಧಿಗಳಿಗೆ ಅನುಮತಿ ಪಡೆಯಬೇಕಿರುತ್ತದೆ.<br>ಸದರಿ ಕಾಯ್ದೆಯ ಕಲಂ 4-ಕೆ ಗೆ ನಿಯಮಗಳು ಇನ್ನೂ ಜಾರಿಗೆ ಬರದ ಕಾರಣ, ವಿನ್ಯಾಸ ಅನುಮೋದನೆಗೆ ಸಂಬಂಧಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕೈಪಿಡಿ ಸಂಖ್ಯೆ:ಗ್ರಾಅಪ/86/ ಅಗ್ರಾಪಂ/2014, ದಿನಾಂಕ:11-11-2014 ರ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದೆ. |
| (ಆ) | ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಒಳಪಡದೇ ಇರುವ ಪ್ರದೇಶದಲ್ಲಿ ಮಹಾಯೋಜನೆ ಅಲಭ್ಯತೆಯ ಹಿನ್ನಲೆಯಲ್ಲಿ ಸದರಿ ಸ್ಥಳಗಳಿಗೆ ಅನ್ವಯಿಸುವ ವಿವಿಧ ಇಲಾಖೆಗಳ ಹಲವು ಸುತ್ತೋಲೆ ಮೂಲಕ ಏಕ ಹಾಗೂ ಬಹು ನಿವೇಶನ ಬಡಾವಣೆ ನಕ್ಷೆ ಅನುಮೋದನೆಯಲ್ಲಿ ಆಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲು ಯಾವಾಗ ಕ್ರಮವಹಿಸಲಾಗುವುದು; | Unified Land Management System (ULMS) ತಂತ್ರಾಂಶದಡಿಯಲ್ಲಿ, ವಿನ್ಯಾಸ ನಕ್ಷೆ ಅನುಮೋದನೆಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| (ಇ) | ಏಕ ಹಾಗೂ ಬಹು ನಿವೇಶನ ಬಡಾವಣೆ ನಕ್ಷೆ ಅನುಮೋದನೆ ರಸ್ತೆ ಅಗಲೀಕರಣ, ಸಾರ್ವಜನಿಕ ರಸ್ತೆ ಮತ್ತು ರಸ್ತೆ ಜಾಗಗಳ ಹಸ್ತಾಂತರದ ಬಗ್ಗೆ ವಿವಿಧ ಇಲಾಖೆಗಳ ಸುತ್ತೋಲೆಗಳಲ್ಲಿರುವ ವೈರುಧ್ಯಗಳನ್ನು ಸರಿಪಡಿಸಲು ಯಾವ ರೀತಿ ಕ್ರಮವಹಿಸಲಾಗುತ್ತಿದೆ; | ಅನುಮೋದಿತ ವಿನ್ಯಾಸದಲ್ಲಿನ ರಸ್ತೆಗಳನ್ನು ಮಹಾಯೋಜನೆಯಲ್ಲಿನ ಪ್ರಸ್ತಾಪಿತ ರಸ್ತೆ / ರಸ್ತೆ ಅಗಲೀಕರಣ, ಸಾರ್ವಜನಿಕ ರಸ್ತೆ, ರಸ್ತೆ ಜಾಗಗಳನ್ನು ಸಕ್ಷಮ ಪ್ರಾಧಿಕಾರದ ನಿಯಮಾನುಸಾರ (PWD, SH, NH etc) ರಸ್ತೆಗೆ ಅಗತ್ಯ ಜಾಗೆಯನ್ನು ನೊಂದಾಯಿತ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಿಕೊಳ್ಳಲಾಗುತ್ತದೆ. |

| | | |
|---|---|---|
| (ಈ) | ಕೇಂದ್ರ ಕಛೇರಿಯ DTCP-1-CIRC-2022-23/420, ದಿನಾಂಕ: 19.05.2022 ರ ಸುತ್ತೋಲೆಯನ್ನು ಹಿಂಪಡೆದ ಕಾರಣ 2.00 ಎಕರೆಗಿಂತ ಹೆಚ್ಚಿನ ವಿಸ್ತೀರ್ಣದ ಬಡಾವಣೆ ನಕ್ಷೆ ಅನುಮೋದನೆಗೆ ಕಡತಗಳು ಜಂಟಿ ನಿರ್ದೇಶಕರ ಕಚೇರಿ ಮೈಸೂರಿಗೆ ಹೋಗಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದ್ದು, ಇದನ್ನು ಸರಿಪಡಿಸಲು ಸರ್ಕಾರ ಚಿಂತಿಸಿದೆಯೇ? | ಶಾಖಾ ಕಛೇರಿಗಳಿಂದ ವಿವಿಧ ಇಲಾಖೆಗಳಿಂದ ಹೊರಡಿಸಿರುವ ಸರ್ಕಾರದ ಸುತ್ತೋಲೆ / ಕಾಯ್ದೆಯಲ್ಲಿನ ಅವಕಾಶಗಳನ್ನು ತಪ್ಪಾಗಿ ಅರ್ಥೈಸಿಕೊಂಡು ಹಾಗೂ ಸುತ್ತೋಲೆಗಳಲ್ಲಿನ ಸೂಚನೆಗಳನ್ನು ಅನುಸರಿಸದೇ ವಿನ್ಯಾಸ ನಕ್ಷೆಗಳಿಗೆ ತಾಂತ್ರಿಕ ಅನುಮೋದನೆ ನೀಡುವ ಕುರಿತು ಸಾರ್ವಜನಿಕರಿಂದ ಸ್ವೀಕೃತಿಯಾದ ಹಲವಾರು ದೂರುಗಳ ಕುರಿತು ಮತ್ತು ವಿಭಾಗೀಯ / ವಲಯ ಕಛೇರಿಗಳಿಂದ ನಡೆಸಲಾದ ಶಾಖಾ ಕಛೇರಿಗಳ ತಪಾಸಣೆಯಲ್ಲಿಯೂ ಸಹ ಹಲವಾರು ಆಕ್ಷೇಪಣೆಗಲು ಸ್ವೀಕೃತಿಯಾದ ಹಿನ್ನಲೆಯಲ್ಲಿ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಕೇಂದ್ರು ಕಛೇರಿಯಿಂದ ದಿನಾಂಕ: 19.05.2022 ರಂದು ಹೊರಡಿಸಲಾದ ಸುತ್ತೋಲೆಯನ್ನು ಹಿಂಪಡೆಯಲಾಗಿರುತ್ತದೆ.<br><br>ಈ ಸಂಬಂಧ ಸಾರ್ವಜನಿಕ ಸಮಸ್ಯೆಗಳು ಉದ್ಭವಿಸಿದಲ್ಲಿ ಈ ಕುರಿತು ಪರಿಶೀಲಿಸಲಾಗುವುದು. |

ಕಡತ ಸಂಖ್ಯೆ: ನಅಇ 481 ಮೈಅಪ್ರಾ 2024

(ಬಿ.ಎಸ್.ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು.